# ಬರದೆ ಬಾರಿಸದಿರು ತಂಬೂರಿ


ಚಿತ್ರ: ದಿನೇಶ್ ಹೊಳ್ಳ

ತರವಲ್ಲ ತಗಿ ನಿನ್ನ ತಂಬೂರಿ, ಸ್ವರ
ಬರದೆ ಬಾರಿಸದಿರು ತಂಬೂರಿ
ಸರಸ ಸಂಗೀತದ ಕುರುಹುಗಳರಿಯದೆ
ಬರದೆ ಬಾರಿಸದಿರು ತಂಬೂರಿ

**-ಶಿಶುನಾಳ ಶರೀಫ**

ಸಂಗೀತದ ಹೆಸರಿನಲ್ಲಿ ಅಪಸ್ವರಗಳನ್ನು ನುಡಿಸುವ ವ್ಯಕ್ತಿಯ ಕುರಿತ ಟೀಕೆಯಂತೆ ಕಾಣಿಸುವ 'ತರವಲ್ಲ ತಗಿ ನಿನ್ನ ತಂಬೂರಿ ಸ್ವರ' ಗೀತೆ, ಬಂಡವಾಳವಿಲ್ಲದ ಎಲ್ಲ ಕ್ರಿಯೆಗಳಲ್ಲಿನ ಬಡಾಯಿಗೆ ಸಂಬಂಧಿಸಿದ್ದು. ಗೋಪಾಲಕೃಷ್ಣ ಅಡಿಗರ 'ಪ್ರಾರ್ಥನೆ'ಯೂ ಇದೇ: 'ದೊಡ್ಡ ಮಾತು ಬೆಲೂನು ಹಿಗ್ಗುವಾಗ್ಗೆಲ್ಲ ತಾಗಿಸು ನಿಜದ ಸೂಜಿಮೊನೆ'.

ಸಂಗೀತ ಎಂದರೆ ಧ್ವನಿ, ಶಬ್ದ. ಮಾತು ಕೂಡ ಶಬ್ದ–ಧ್ವನಿ ರೂಪವಷ್ಟೇ. ಸಂಗೀತವಾಗಲೀ ಮಾತಾಗಲೀ ಸುಸಂಬದ್ಧವಾಗಿದ್ದಾಗ ಅರ್ಥಪೂರ್ಣವಾಗಿರುತ್ತದೆ; ಎದುರಿನವರ ಮನಸ್ಸನ್ನು ತಾಕುತ್ತದೆ. ಸುಸಂಬದ್ಧತೆ ಕಳೆದುಕೊಂಡಾಗ ಅಪಸ್ವರ, ಕಿರಿಕಿರಿ ಉಂಟುಮಾಡುತ್ತದೆ; ಮಾತು ಬರಿಯ ಶಬ್ದಗಳ ಬಡಬಡಿಕೆಯಾಗುತ್ತದೆ.

ಈಗಿನದೇನಿದ್ದರೂ ಶಬ್ದಮಾಲಿನ್ಯದ ಕಾಲ. ಧ್ವನಿಶಕ್ತಿಯ ಬಗ್ಗೆ ನಂಬಿಕೆಯುಳ್ಳವರು ಕಡಿಮೆ ಆಗುತ್ತಾ ಆಗುತ್ತಾ, ಅಬ್ಬರವೇ ಜನರ ಗಮನಸೆಳೆಯುತ್ತಿದೆ. ಈ ಅಬ್ಬರದಲ್ಲಿ, ಸ್ವರಮಾಧುರ್ಯ ಬಲ್ಲವರು ಅಥವಾ ಮಾತಿನ ಧ್ವನಿಶಕ್ತಿಯ ಅರಿವುಳ್ಳವರು ಹಿನ್ನೆಲೆಗೆ ಸರಿದುಬಿಡುತ್ತಾರೆ. ಬಹುಶಃ, ಸರಸ ಮತ್ತು ಸಂಗೀತ ಒಂದೂ ಇಲ್ಲದ ಬಾಯಿಬಡುಕತನವನ್ನು ಶರೀಫರೂ ಕಂಡಿರಬೇಕು. ಯಾವುದೇ ದಾಕ್ಷಿಣ್ಯವಿಲ್ಲದೆ, 'ತರವಲ್ಲ ತಗಿ ನಿನ್ನ ತಂಬೂರಿ ಸ್ವರ, ಬರದೆ ಬಾರಿಸದಿರು ತಂಬೂರಿ' ಎಂದು ಹೇಳುವುದು ಅವರಿಗೆ ಸಾಧ್ಯವಾಗಿದೆ. ಶರೀಫರ ಈ ಮಾತು ವರ್ತಮಾನಕ್ಕೆ ಮತ್ತೂ ಅಗತ್ಯವಾದುದು.

ಇಡೀ ಜಗತ್ತು ಏಕಶ್ರುತಿಯಲ್ಲಿ ಅಬ್ಬರದ ಹಾಡಿನಲ್ಲಿ ಮಗ್ನವಾಗಿ, ಸುಸ್ವರವನ್ನೂ ಸರಸದ ಸೊಗಸನ್ನೂ ಮರೆತಿರುವಾಗ, 'ತರವಲ್ಲ ತಗಿ ನಿನ್ನ...' ಎನ್ನುವ ಶರೀಫರು ಈ ಸಮಾಜದ ಸ್ವಾಸ್ಥ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬೇಕು.

—ಮಹತಿ

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68